# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಮಹಿಳಾ ಅಭಿವೃದ್ಧಿ ಯೋಜನೆಗಳು



# ಮಾತೃಪೂರ್ಣ

- ಮಾತೃಪೂರ್ಣ ಯೋಜನೆಯು ಗರ್ಭಿಣಿ ಮತ್ತು ಬಾಣಂತಿಯರ ಅಪೌಷ್ಟಿಕತೆ ನಿವಾರಣೆ ದೃಷ್ಟಿಯಿಂದ ಮಧ್ಯಾಹ್ನ ಬಿಸಿಯೂಟವನ್ನು ವಿತರಿಸುವ ಕಾರ್ಯಕ್ರಮವಾಗಿರುತ್ತದೆ.

- ಪ್ರತಿ ಫಲಾನುಭವಿಗೆ ದಿನವೊಂದಕ್ಕೆ ರೂ.21/-ರ ಘಟಕ ವೆಚ್ಚದಲ್ಲಿ ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತಿದೆ.

- ಸತ್ವಯುತ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳಲ್ಲಿಯೇ ತಯಾರಿಸಿ ಗರ್ಭಿಣಿ, ಬಾಣಂತಿಯರಿಗೆ ಬಿಸಿಯೂಟವನ್ನು ಉಣಬಡಿಸುವ ಕಾರ್ಯಕ್ರಮವಾಗಿರುತ್ತದೆ.





| ಮಾತೃಪೂರ್ಣಯೋಜನೆಯಡಿ ವಿತರಿಸಲಾಗುವ ಮಧ್ಯಾಹ್ನದ ಬಿಸಿಯೂಟ | |
|---|---|
| ಗರ್ಭಿಣಿ/ಬಾಣಂತಿಯರಿಗೆ | ಅನ್ನ, ತರಕಾರಿ ಸಾಂಬಾರ್/ಮೊಳಕೆ ಕಾಳಿನ ಸಾಂಬಾರ್,<br>ಮೊಟ್ಟೆ, ಹಾಲು, ಚಿಕ್ಕಿ |

# ಪ್ರಧಾನಮಂತ್ರಿ ಮಾತೃವಂದನ

- ಈ ಯೋಜನೆಯು ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರ ಆರೋಗ್ಯ ಸುಧಾರಣೆಯನ್ನು ಕಾಪಾಡಲು, ತಾಯಿ ಮತ್ತು ಮಗುವಿನ ಮರಣವನ್ನು ನಿಯಂತ್ರಿಸಲು, ಪೌಷ್ಟಿಕ ಆಹಾರ ಹಾಗೂ ಔಷಧೋಪಚಾರ ಪಡೆಯಲು ಈ ಸಹಾಯಧನವು ಉಪಯುಕ್ತವಾಗಿದೆ

- 3 ಕಂತುಗಳಲ್ಲಿ ರೂ.5000/-ಗಳನ್ನು (1ನೇ ಕಂತುರೂ.1000/-, 2ನೇ ಕಂತುರೂ.2000/- ಮತ್ತು3ನೇ ಕಂತುರೂ.2000/-) ಹಂತಹಂತವಾಗಿ ನೀಡಲಾಗುತ್ತದೆ.

- ಅಂಗನವಾಡಿ ಕೇಂದ್ರದಿಂದ ಅರ್ಜಿಗಳನ್ನು ಸ್ವೀಕರಿಸಿ ಭರ್ತಿ ಮಾಡಿದ ಅರ್ಜಿಗಳನ್ನು ಫಲಾನುಭವಿ ಮತ್ತು ಪತಿಯ ಆಧಾರ್‌ಕಾರ್ಡ್, ತಾಯಿಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಪುಸ್ತಕದ ಪ್ರತಿಯೊಂದಿಗೆ ಅರ್ಜಿಗಳನ್ನು ಸಲ್ಲಿಸುವುದು.

- ಈ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲಾ(ಎ.ಪಿ.ಎಲ್./ಬಿ.ಪಿ.ಎಲ್) ಗರ್ಭಿಣಿ ಮಹಿಳೆಯರ ಮೊದಲ ಜೀವಂತ ಹೆರಿಗೆಗೆ (ಮೊದಲ ಮಗುವಿಗೆ ಮಾತ್ರ) ಪ್ರೋತ್ಸಾಹಧನವನ್ನು ನೀಡುವ ಮಾತೃತ್ವ ಸೌಲಭ್ಯದ ಯೋಜನೆಯಾಗಿದೆ.



## ಪೋಷಣ್ ಅಭಿಯಾನ ಯೋಜನೆಣ

- ಪ್ರತಿ ತಿಂಗಳು ಮೊದಲನೇ ಹಾಗೂ ಮೂರನೇ ಶುಕ್ರವಾರ ಅಂಗನವಾಡಿ ಮಟ್ಟದಲ್ಲಿ ಸಮುದಾಯ ಆಧಾರಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
- ಈ ಕಾರ್ಯಕ್ರಮದಲ್ಲಿ ಸೀಮಂತ ಕಾರ್ಯಕ್ರಮ, ಅನ್ನಪ್ರಾಶಾನ ದಿವಸ, ಸುಪೋಶನ ದಿವಸ, ಎದೆ ಹಾಲಿನ ಮಹತ್ವ ಮುಂತಾದ ವಿಷಯಗಳ ಬಗ್ಗೆ ಮಹಿಳೆಯರಿಗೆ ಮತ್ತು ಪೋಷಕರಿಗೆ ತಿಳಿಸಲಾಗುವುದು.
- ಸಮುದಾಯ ಆಧಾರಿತ ಚಟುವಟಿಕೆಗಳಲ್ಲಿ ಅಂಗನವಾಡಿ ವ್ಯಾಪ್ತಿಯ ಫಲಾನುಭವಿ ಮತ್ತು ಸಾರ್ವಜನಿಕರಿಗೆ ಆರೋಗ್ಯ ಮತ್ತು ಪೌಷ್ಟಿಕತೆ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.
- ಈ ಚಟುವಟಿಕೆಯಲ್ಲಿ ಸಾರ್ವಜನಿಕರು ಆರೋಗ್ಯ ಪೌಷ್ಟಿಕತೆಗೆ ಸಂಬಂಧಿಸಿದ ತಮ್ಮ ಅನುಭವ ಮತ್ತು ಸಮಸ್ಯೆಗಳನ್ನ ನಿಭಾಯಿಸುವ ವಿಧಾನ ಕುರಿತು ಹಂಚಿಕೊಂಡು ಪ್ರೋತ್ಸಹ ನೀಡುವುದು.



# ಸ್ತ್ರೀಶಕ್ತಿ ಯೋಜನೆ

- ಮಹಿಳೆಯರಿಗೆ ಆರ್ಥಿಕ ಪ್ರಗತಿಯನ್ನು ಸಾಧಿಸುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣ ಮೂಡಿಸುವಂತಹ ಪ್ರಕ್ರಿಯೆಯನ್ನು ಬಲಪಡಿಸುವುದು.
- ಇಲಾಖೆ ವತಿಯಿಂದ ಗುಂಪು ರಚನೆಯಾಗಿ ಕನಿಷ್ಟ 6 ತಿಂಗಳು ಉಳಿತಾಯ ನಿರ್ವಹಿಸಿದ ಪ್ರತಿಯೊಂದು ಗುಂಪಿಗೆ ಸರ್ಕಾರದ ವತಿಯಿಂದ ಸುತ್ತುನಿಧಿಯಾಗಿ ರೂ.5000/-ಗಳನ್ನು ನೀಡಲಾಗುವುದು.
- ಆದಾಯೋತ್ಪನ್ನ ಚಟುವಟಿಕೆ ಕೈಗೊಂಡಿರುವ ಗುಂಪಿಗಳಿಗೆ ತಲಾ ರೂ.5000/-ಗಳಂತೆ ಪ್ರೋತ್ಸಾಹಧನ ನೀಡುವುದು.
- ಅಧಿಕ ಉಳಿತಾಯ ಮಾಡಿದ ಗುಂಪುಗಳಿಗೆ ರೂ.75000 ದಿಂದ 1.00 ಲಕ್ಷ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ ಮತ್ತು ಶೇ.6% ರಷ್ಟು ಬಡ್ಡಿ ಸಹಾಯಧನವನ್ನು ಇಲಾಖಾ ವತಿಯಿಂದ ಒದಗಿಸಲಾಗುತ್ತಿದೆ.
- ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಗುಂಪುಗಳಿಗೆ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರಶಸ್ತಿಗಳನ್ನು ನೀಡಲಾಗುವುದು.



# ಭಾಗ್ಯಲಕ್ಷ್ಮಿ -ಸುಕನ್ಯಾ ಸಮೃದ್ಧಿ ಖಾತೆ ಯೋಜನೆ

- ಭಾಗ್ಯಲಕ್ಷ್ಮಿ ಯೋಜನೆಯನ್ನು ಪ್ರಸ್ತುತ ಅಂಚೆ ಇಲಾಖೆಯ ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

- ಸದರಿ ಯೋಜನೆಯಡಿ ಬಿಪಿಎಲ್ ಕುಟುಂಬದ 2 ಹೆಣ್ಣು ಮಕ್ಕಳಿಗೆ, ಪ್ರತಿ ಮಗುವಿನ ಹೆಸರಿನಲ್ಲಿ ರೂ.3,000/- ದಂತೆ 15 ವರ್ಷಗಳ ವರೆಗೆ ಒಟ್ಟು ರೂ.45,000/-ಗಳನ್ನು ಠೇವಣಿ ಹೂಡಲಾಗುತ್ತದೆ. 21 ವರ್ಷ ಅವಧಿ ಪೂರ್ಣಗೊಂಡ ನಂತರ ಪರಿಪಕ್ವ ಮೊತ್ತ ರೂ.1.27 ಲಕ್ಷ ನೀಡಲಾಗುತ್ತದೆ. 10ನೇ ತರಗತಿ ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಖಾತೆಯಲ್ಲಿರುವ ಮೊತ್ತದ ಶೇ.50 ರಷ್ಟು ಭಾಗವನ್ನು ಹಿಂಪಡೆಯಲು ಅವಕಾಶವಿರುತ್ತದೆ.



# ಸುಕನ್ಯಾ ಸಮೃದ್ಧಿ ಖಾತೆ ಯೋಜನೆ

- ಕನಿಷ್ಠ ರೂ.250/–ರೊಂದಿಗೆ, 10 ವರ್ಷದೊಳಗಿನ ಹೆಣ್ಣು ಮಗುವಿನ ತಂದೆ, ತಾಯಿ/ಪೋಷಕರು ಖಾತೆಯನ್ನು ತೆರೆಯಬಹುದು. ಒಂದು ಹೆಣ್ಣು ಮಗುವಿಗೆ ಒಂದು ಖಾತೆ ಹಾಗೂ ಒಂದು ಕುಟುಂಬದಲ್ಲಿ ಎರಡು ಖಾತೆಗಳನ್ನು ಮಾತ್ರ ತೆರೆಯಲು ಅವಕಾಶವಿರುತ್ತದೆ.
- ವರ್ಷದಲ್ಲಿಕನಿಷ್ಠ ರೂ.250/– ಹಾಗೂ ಗರಿಷ್ಠ 1.5ಲಕ್ಷ ಜಮಾ ಮಾಡಬಹುದು.ಖಾತೆಯು 21 ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ.
- ಹೆಣ್ಣು ಮಗುವಿಗೆ 18 ವರ್ಷ ವಯಸ್ಸು ತುಂಬಿದ ನಂತರ 50%ರವರೆಗೆ ಮೊತ್ತವನ್ನು ಹಿಂಪಡೆಯಬಹುದು.
- ಈ ಯೋಜನೆಯಲ್ಲಿ ಬಡ್ಡಿದರವು ಅತ್ಯಂತ ಆಕರ್ಷಕವಾಗಿದೆ. (ಪ್ರಸ್ತುತಬಡ್ಡಿದರ 8.4%). ವಾರ್ಷಿಕಚಕ್ರಬಡ್ಡಿ.
- ಖಾತೆಯನ್ನು ಭಾರತದಲ್ಲಿ ಎಲ್ಲಿಯಾದರೂ ಮತ್ತು ಬ್ಯಾಂಕಿನಿಂದ ಅಂಚೆಕಛೇರಿ ಹಾಗೂ ಅಂಚೆಕಛೇರಿಯಿಂದ ಬ್ಯಾಂಕಿಗೆವರ್ಗಾಯಿಸಬಹುದು.



## ಉಜ್ವಲ

- ಈ ಯೋಜನೆಯಡಿ ವಿವಿಧ ಕಾರಣಗಳಿಂದಾಗಿ ಅನೈತಿಕ ಸಾಗಾಣಿಕೆಗೆ ಒಳಗಾಗುವ ಮಹಿಳೆಯರು ಮತ್ತು ಮಕ್ಕಳನ್ನು ರಕ್ಷಿಸಿ, ಪುನರ್ವಸತಿ ಮತ್ತು ಸ್ವಯಂ ಉದ್ಯೋಗ ತರಬೇತಿ ನೀಡಲಾಗುವುದು.
- ಪುನರ್ವಸತಿ ಯೋಜನೆಯಡಿ ಟೈಲರಿಂಗ್, ಎಂಬ್ರಾಯಿಡರಿ, ಕಂಪ್ಯೂಟರ್ ತರಬೇತಿ ನೀಡಿ ಸ್ವಯಂ ಉದ್ಯೋಗ ಮಾಡಲು ಅವಕಾಶ ಕಲ್ಪಿಸಲಾಗುವುದು.



## ಸ್ವೀಕಾರ ಕೇಂದ್ರ

- ಸಂಕಷ್ಟದಲ್ಲಿರುವ ಹಾಗೂ ಅನೈತಿಕ ಚಟುವಟಿಕೆಗಳಿಂದ ರಕ್ಷಿಸಲ್ಪಟ್ಟ ಮಹಿಳೆಯರಿಗೆ ತಾತ್ಕಾಲಿಕ ಆಶ್ರಯ ಒದಗಿಸುವುದು.
- ಸ್ವೀಕಾರ ಕೇಂದ್ರಕ್ಕೆ ದಾಖಲಾಗುವ ಮಹಿಳೆಯರು ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಪೂರಕವಾದ ವಾತಾವರಣವನ್ನು ಕಲ್ಪಿಸುವುದು.




## ರಾಜ್ಯ ಮಹಿಳಾ ನಿಲಯ

- ಅನೈತಿಕ ಸಾಗಾಣಿಕೆ ಒಳಗಾಗುವ ಮಹಿಳೆಯರು, ನಿರ್ಗತಿಕ ಮಹಿಳೆಯರು, ಕೌಟುಂಬಿಕ ಹಿಂಸೆಗೆ ಒಳಗಾಗುವ ಮಹಿಳೆಯರಿಗೆ ಪುನರ್ವಸತಿ ಸೌಲಭ್ಯಕಲ್ಪಿಸುವುದು.
- ಈ ರೀತಿಯ ಸಮಸ್ಯೆಗಳಿಂದ ಮಹಿಳಾ ನಿಲಯದಲ್ಲಿ ದಾಖಲಾಗುವ ಫಲಾನುಭವಿಗಳಿಗೆ ವಿದ್ಯಾಭ್ಯಾಸ ಹಾಗೂ ಸ್ವಯಂ ಉದ್ಯೋಗ ತರಬೇತಿ (ಬ್ಯಾಗ್‌ತಯಾರಿಕೆ, ಹೋಟೆಲ್ ನಿರ್ವಹಣೆತರಬೇತಿ, ಗೊಂಬೆಗಳ ತಯಾರಿಕೆ, ಕೃತಕ ಆಭರಣಗಳ ತಯಾರಿಕೆಇತ್ಯಾದಿ) ನೀಡಿ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದು.
- ಅರ್ಹ ಮಹಿಳೆಯರು ವೈವಾಹಿಕ ಜೀವನ ನಡೆಸಲು ನಿಯಮಾನುಸಾರ ವಿವಾಹಗಳನ್ನು ಆಯೋಜಿಸುವುದು.



# ಸಾಂತ್ವನ ಯೋಜನೆ

- ಕೌಟುಂಬಿಕ ದೌರ್ಜನ್ಯಕ್ಕೊಳಗಾದ, ಪರಿತ್ಯಕ್ತ ಮಹಿಳೆಯರು, ಸಮಾಜದ ನಿಂದನೆಗೊಳಗಾದ, ಮಹಿಳೆಯರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸುವುದು, ಕಾನೂನಿನ ನೆರವು ಹಾಗೂ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗುವುದು.
- ದೌರ್ಜನ್ಯ ಹಾಗೂ ಅತ್ಯಾಚಾರಕ್ಕೆ ಒಳಪಟ್ಟ ಮಹಿಳೆಯರಿಗೆ ಆರ್ಥಿಕ ಸಹಾಯ, ಕಾನೂನಿನ ನೆರವು ಮತ್ತು ತಾತ್ಕಾಲಿಕ ಆಶ್ರಯ ಒದಗಿಸುವುದು ಹಾಗೂ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ತರಬೇತಿ ನೀಡಿ ಮಹಿಳೆಯರು ಸ್ವಾವಲಂಬಿಗಳಾಗಿ ಬದುಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.



# ಸ್ವಾಧಾರ ಗೃಹ ಯೋಜನೆ

- ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ,ಆಹಾರ,ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ.
- ಈ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.
- ಸಂತ್ರಸ್ತ ಮಹಿಳೆಯರು ಮತ್ತು ತಾತ್ಕಾಲಿಕ ಆಶ್ರಯ ಬಯಸುವವರು ಈ ಸ್ವಧಾರ ಕೇಂದ್ರಗಳ ಪ್ರಯೋಜನ ಪಡೆಯಬಹುದಾಗಿದೆ.



## ಗೆಳತಿ ವಿಶೇಷ ಚಿಕಿತ್ಸಾಘಟಕ (ಒನ್ ಸ್ಟಾಪ್ ಸೆಂಟರ್-ಸಖಿ)

- ಲೈಂಗಿಕ ದೌರ್ಜನ್ಯ, ಕಿರುಕುಳ, ಅತ್ಯಾಚಾರ, ಆಸಿಡ್ ದಾಳಿ ಇತ್ಯಾದಿ ಸಂಕಷ್ಟಕ್ಕೆ ಒಳಗಾಗುವ ಮಹಿಳೆಯರು ಮತ್ತು ಮಕ್ಕಳಿಗೆ ವೈದ್ಯಕೀಯ ನೆರವು, ಆಪ್ತಸಮಾಲೋಚನೆ, ಪೋಲಿಸ್ ನೆರವು, ಕಾನೂನಿನ ನೆರವು, ಇತ್ಯಾದಿ ಸೌಲಭ್ಯಗಳನ್ನು ಒಂದೇ ಸೂರಿನಡಿ ಒದಗಿಸುವುದು.
- ಎಲ್ಲಾ ಜಿಲ್ಲೆಗಳಲ್ಲಿ ಒನ್ ಸ್ಟಾಪ್ ಸೆಂಟರ್ಗಳು ಸ್ವಂತ ಕಟ್ಟಡ/ಜಿಲ್ಲಾ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.
- ಈ ಘಟಕದಲ್ಲಿದಾಖಲಾಗುವ ಸಂತ್ರಸ್ಥರಿಗೆ ಸ್ಥೈರ್ಯನಿಧಿ ಯೋಜನೆ ಮತ್ತು ಪೋಕ್ಸೋಕಾಯ್ದೆಯಡಿಆರ್ಥಿಕ ಪರಿಹಾರ ನೀಡುವುದು. (ಪ್ರಕರಣದಆಧಾರದ ಮೇಲೆ ಪರಿಹಾರ ನಿಗದಿಪಡಿಸಲಾಗುವುದು)



# ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯಗಳು

ಜೀವನ ನಿರ್ವಹಣೆಗಾಗಿ ಉದ್ಯೋಗ, ಅರೆಉದ್ಯೋಗ, ತರಬೇತಿ ಮತ್ತು ಶಿಕ್ಷಣ ಪಡೆಯುವ ಮಹಿಳೆಯರಿಗೆ ಊಟ ವಸತಿ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಯೋಜನೆಯಾಗಿದೆ.



# ಮಾರುಕಟ್ಟೆ ನೆರವು ಯೋಜನೆ

- ಮಹಿಳಾ ಉದ್ಯಮಿಗಳು ಮತ್ತು ಮಹಿಳಾ ಸ್ವಸಹಾಯ ಸಂಘಗಳು ತಯಾರಿಸಿದ ಉತ್ಪನ್ನಗಳ ಮಾರಾಟ ಮಾಡಲು ಹಾಗೂ ಉದ್ದಿಮೆದಾರನ್ನುಉತ್ತೇಜಿಸುವ ಸಲುವಾಗಿ ಜಿಲ್ಲಾ ಮತ್ತುತಾಲ್ಲೂಕು ಮಟ್ಟದಲ್ಲಿ ವಸ್ತುಗಳ ಪ್ರದರ್ಶನ ಮತ್ತು ಮಾರಾಟಮೇಳ ಏರ್ಪಡಿಸಲಾಗುವುದು.
- ಸಮರ್ಥ ಮಹಿಳಾ ಉದ್ದಿಮೆದಾರರುಗಳನ್ನು ರಾಜ್ಯ ಮತ್ತುರಾಷ್ಟ್ರ ಮಟ್ಟದಲ್ಲಿಏರ್ಪಡಿಸುವ ವಿವಿಧ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು.



## ಕಿರುಸಾಲ ಯೋಜನೆ

ಸ್ತ್ರೀ ಶಕ್ತಿ ಸ್ವ-ಸಹಾಯ ಗುಂಪಿನ ಸದಸ್ಯರುಗಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಇತರೆ ವರ್ಗದ ಗುಂಪಿಗೆ ಬಡ್ಡಿರಹಿತವಾಗಿ ರೂ. 1.00 ಲಕ್ಷದಿಂದ ರೂ. 2.00 ಲಕ್ಷಗಳವರೆಗೆ, ಪರಿಶಿಷ್ಟ ಜಾತಿ ಮತ್ತು ಪಂಗಡದ ಗುಂಪುಗಳಿಗೆ ರೂ. 1.00 ಲಕ್ಷದಿಂದ ರೂ. 3.00 ಲಕ್ಷಗಳವರೆಗೆ, ಬಡ್ಡಿರಹಿತ ಸಾಲವನ್ನು ನಿಗಮದಿಂದ ನೀಡಲಾಗುವುದು.



## ಚೇತನಾ ಯೋಜನೆ

ಚೇತನ ಯೋಜನೆಯಡಿ ದಮನಿತ ಮಹಿಳೆಯರು ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ನೇರವಾಗಿ ರೂ. 50,000/- (ರೂ. 25,000/- ಗಳ ಸಾಲ ರೂ. 25,000/-ಗಳ ಪ್ರೋತ್ಸಾಹಧನ) ಗಳ ಆರ್ಥಿಕ ಸೌಲಭ್ಯವನ್ನು 6 ದಿನಗಳ ಇ.ಡಿ.ಪಿ. ತರಬೇತಿಯೊಂದಿಗೆ ಕಲ್ಪಿಸಲಾಗುವುದು.



# ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನಯೋಜನೆ(KSFCಮೂಲಕ)

ಸಣ್ಣ/ಮದ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳಲ್ಲಿ ಮಹಿಳೆಯರು ನೇರವಾಗಿ ಉದ್ಯೋಗ ಚಟುಚಟಿಕೆಗಳನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಮಂಜೂರಾಗುವ ಕನಿಷ್ಠ ರೂ. 5.00 ಲಕ್ಷದಿಂದ ರೂ. 2 ಕೋಟಿವರೆಗೆ ಸಾಲದ ಮೊತ್ತಕ್ಕೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೇ.10ರ ಬಡ್ಡಿ ಸಹಾಯಧನ ನೀಡಲಾಗುವುದು.



# ಮಹಿಳಾ ತರಬೇತಿಯೋಜನೆ

- ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ, ವಿಧವೆಯರಿಗೆ, ನಿರ್ಗತಿಕ ಮತ್ತು ವಿಕಲಚೇತನರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಿ ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು, ಹಾಗೂ ಚಿಕ್ಕ ಉದ್ಯಮಗಳನ್ನು ಸ್ಥಾಪಿಸಲು ಇಚ್ಛೆಯುಳ್ಳ ಮಹಿಳೆಯರಿಗೆ ಸಾಮಾನ್ಯ ಲೆಕ್ಕ ಪತ್ರ ನಿರ್ವಹಣೆ, ಕಚ್ಚಾಸಾಮಗ್ರಿಗಳ ನಿರ್ವಹಣೆ, ಮಾರುಕಟ್ಟೆ, ಬ್ಯೂಟಿ ಕಲ್ಚರ್, ಫ್ಯಾಶನ್ ಡಿಸೈನಿಂಗ್, ಗಾರ್ಮೆಂಟ್ಸ್, ಪ್ರಿಂಟಿಂಗ್, ಮೀಡಿಯಾ, ವೀಡಿಯೋಗ್ರಾಫಿ, ಹಾಸ್ಪಿಟಾಲಿಟಿ, ಆಹಾರ ಸಂಸ್ಕರಣೆ, ಬ್ಯಾಗ್ ತಯಾರಿಕೆ, ಕಸೂತಿ ಇನ್ನಿತರೆ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು.

- ವಿಕಲಚೇತನ ಹಾಗೂ ಅಸಹಾಯಕ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು ಹಾಗೂ ಆದಾಯದ ಮಿತಿ ಇರುವುದಿಲ್ಲ.

- ತರಬೇತಿಯನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಮಾನ್ಯತೆ ಪಡೆದ ತರಬೇತಿ ಕೇಂದ್ರಗಳ ಮೂಲಕ ತರಬೇತಿ ನೀಡಲಾಗುವುದು.



## ಉದ್ಯೋಗಿನಿ ಯೋಜನೆ

- ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್‌ಗಳಿಂದ ಸಾಲ ಮತ್ತು ನಿಗಮದ ಮೂಲಕ ಸಹಾಯಧನ ನೀಡಲಾಗುವುದು.

- ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ರೂ. 1.00 ಲಕ್ಷ ಮೇಲ್ಪಟ್ಟು ರೂ. 3.00 ಲಕ್ಷದವರೆಗೆ ಇರುವ ಪ್ರಕರಣಗಳಲ್ಲಿ ನಿಗಮದಿಂದ ಸಹಾಯದನದ ಮೊತ್ತ' ಶೇ 50 ರಷ್ಟು ಅಥವಾ ಗರಿಷ್ಟ ರೂ. 1.50 ಲಕ್ಷ ನೀಡಲಾಗುವುದು. ಕುಟುಂಬದ ವಾರ್ಷಿಕ ಆದಾಯವನ್ನು ಗರಿಷ್ಟ ರೂ. 2.00 ಲಕ್ಷಗಳಿಗೆ ಮಿತಿಗೊಳಿಸಿದೆ.

- ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಮಹಿಳೆಯರಿಗೆ ಯೋಜನಾ ವೆಚ್ಚ ರೂ. 1.00 ಲಕ್ಷದಿಂದ ರೂ. 3.00 ಲಕ್ಷಗಳವರೆಗೆ, ಶೇ. 30 ರಷ್ಟು ಅಥವಾ ಗರಿಷ್ಠ ರೂ. 90,000/- ಗಳ ಸಹಾಯ ಧನ ನೀಡಲಾಗುವುದು ಸಾಮಾನ್ಯ ವರ್ಗದವರ ಕುಟುಂಬದ ವಾರ್ಷಿಕ ಆದಾಯವನ್ನು ಗರಿಷ್ಠ ರೂ. 1.50 ಲಕ್ಷಗಳಿಗೆ ಮಿತಿಗೊಳಿಸಿದೆ.

- ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ವರ್ಷ ಮೇಲ್ಪಟ್ಟು ಗರಿಷ್ಠ 55 ವರ್ಷದೊಳಗಿರಬೇಕು.


- ಸಾಲ ಮಂಜೂರಾದ ನಂತರ ಸಾಲ ಬಿಡುಗಡೆ ಮುನ್ನ ಈ ಯೋಜನೆಯ ಅರ್ಹ ಫಲಾನುಭವಿಗಳಿಗೆ 3 ರಿಂದ 6 ದಿನಗಳವರೆಗೆ ಉದ್ಯಮಶೀಲತಾ ತರಬೇತಿ ನೀಡಲಾಗುವುದು.



## ಧನಶ್ರೀ ಯೋಜನೆ


- "ಧನಶ್ರೀ" ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ 18–60 ವಯೋಮಿತಿಯ ಹೆಚ್.ಐ.ವಿ. ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಂಡು ಅಭಿವೃದ್ಧಿ ಹೊಂದಲು ಪ್ರೇರೇಪಿಸುವುದು.

- ಪ್ರತಿ ಫಲಾನುಭವಿಗಳಿಗೆ ರೂ. 50,000 (ರೂ. 25,000/–ಗಳ ನೇರ ಸಾಲವನ್ನು ಹಾಗೂ ರೂ. 25,000/– ಗಳನ್ನು ಪ್ರೋತ್ಸಾಹ ಧನವಾಗಿ) ಗಳ ಆರ್ಥಿಕ ಸೌಲಭ್ಯವನ್ನು 3 ರಿಂದ 6 ದಿನಗಳ ಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುವುದು.



# ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ

ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಲಿಂಗತ್ವ ಅಲ್ಪಸಂಖ್ಯಾತರನ್ನು ಸಬಲೀಕರಣಗೊಳಿಸಲು ಹಾಗೂ ಗೌರವಾನ್ವಿತ ಜೀವನವನ್ನು ನಡೆಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ರೂ.50,000/- (ರೂ. 25,000/- ಗಳ ಸಾಲ ರೂ. 25,000/-ಗಳ ಪ್ರೋತ್ಸಾಹಧನ) ಗಳ ಆರ್ಥಿಕ ಸೌಲಭ್ಯವನ್ನು 6 ದಿನಗಳ ಇ.ಡಿ.ಪಿ. ತರಬೇತಿಯೊಂದಿಗೆ ಕಲ್ಪಿಸಲಾಗುವುದು.



## ಹೆಚ್.ಐ.ವಿ. ಪೀಡಿತರಿಗೆ ಸೇವೆಗಳು

## ಅನಾಥರು ಮತ್ತು ಬಾಧಿತ ಮಕ್ಕಳು (OVC)

- ಹೆಚ್.ಐ.ವಿ.ಸೋಂಕಿನಿಂದ ಬಳಲುತ್ತಿರುವ ಮಕ್ಕಳು ಹಾಗು ಹೆಚ್.ಐ.ವಿ. ಸೋಂಕಿತ ಪೋಷಕರ ಮಕ್ಕಳನ್ನು ಬಾಧಿತ ಮಕ್ಕಳೆಂದು ಪರಿಗಣಿಸಿ "ವಿಶೇಷ ಪಾಲನಾ ಯೋಜನೆ"ಯಡಿ ಸೌಲಭ್ಯಒದಗಿಸಲಾಗುತ್ತಿದೆ.

- ಅನಾಥರು–ಏಡ್ಸ್‌ನಿಂದ ಮರಣ ಹೊಂದಿದ ತಂದೆ–ತಾಯಿಯರ 0–18 ವರ್ಷದೊಳಗಿನ ಮಕ್ಕಳು.

- ಮಕ್ಕಳ ವಿದ್ಯಾಭ್ಯಾಸ, ಪೌಷ್ಠಿಕ ಆಹಾರ, ಆರೋಗ್ಯ ಸುಧಾರಣೆಗಾಗಿ ಈ ಯೋಜನೆಯಡಿ ಮಕ್ಕಳಿಗೆ ಮಾಸಿಕ ರೂ.1,000/– ಗಳಂತೆ 18 ವರ್ಷ ಪೂರ್ಣಗೊಳ್ಳುವವರೆಗೆ ಧನ ಸಹಾಯ ನೀಡಲಾಗುವುದು.



# ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ


- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಐದು ವರ್ಷಗಳ ಕಾಲ ಸತತವಾಗಿ ಕಾರ್ಯೋನ್ಮುಖವಾಗಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡಲಾಗುವುದು.

- ವೈಯಕ್ತಿಕ ಪ್ರಶಸ್ತಿಯನ್ನು ಮಹಿಳಾ ಅಭಿವೃದ್ಧಿ, ಕ್ರೀಡೆ, ಸಾಹಿತ್ಯ, ಕಲೆ, ಶಿಕ್ಷಣ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ ಮಹಿಳೆಯರಿಗೆ ಪ್ರಕಟಿಸಲಾಗುವುದು.



## ಬಾಲಕಿಯರ ವಸತಿ ನಿಲಯ

ಹಿಂದುಳಿದ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಅನುಕೂಲವಾಗುವಂತೆ, ಇಲಾಖಾ ಅನುದಾನಿತ ಸ್ವಯಂಸೇವಾ ಸಂಸ್ಥೆಗಳ ಮೂಲಕ 20 ಜಿಲ್ಲೆಗಳಲ್ಲಿ 39 ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ.



## ಯೂನಿವರ್ಸಲೈಸೇಷನ್ ಆಫ್ ವುಮೆನ್ ಹೆಲ್ಪ್‌ಲೈನ್ ಸಂಖ್ಯೆ- 181

- ಮಹಿಳೆಯರಿಗೆ ಮಾಹಿತಿಯನ್ನು ನೀಡಲು ಹಾಗೂ ದೌರ್ಜನ್ಯ ಮತ್ತು ಸಂಕಷ್ಟದಲ್ಲಿರುವ ಮಹಿಳೆಯರಿಗೆ ತುರ್ತು ನೆರವನ್ನು ಒಂದೇ ಸೂರಿನಡಿ ಒದಗಿಸುವ ನಿಟ್ಟಿನಲ್ಲಿ ಯೂನಿವರ್ಸಲೈಸೇಷನ್ ಆಫ್ ವುಮೆನ್ ಹೆಲ್ಪ್‌ಲೈನ್-181 ಎಂಬ ಉಚಿತ ದೂರವಾಣಿ ಸೇವೆಯನ್ನು 24*7 ರಾಜ್ಯಾದ್ಯಂತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಭಾಗಿತ್ವದೊಂದಿಗೆ ಜಾರಿಗೊಳಿಸಲಾಗುತ್ತಿದೆ.

- ಮಹಿಳೆಯರು ತುರ್ತು ಸೇವೆಗಳಿಗಾಗಿ 181-ಮಹಿಳಾ ಸಹಾಯವಾಣಿಯನ್ನು ಸಂಪರ್ಕಿಸಬಹುದಾಗಿದೆ.



## ಬಾಲ್ಯವಿವಾಹ ನಿಷೇಧ ಉಸ್ತುವಾರಿ ಕೋಶ

- 21 ವರ್ಷದೊಳಗಿನ ಗಂಡು ಹಾಗೂ 18 ವರ್ಷದೊಳಗಿನ ಹೆಣ್ಣಿನ ನಡುವೆ ನಡೆಯುವ ಮದುವೆಯನ್ನು ಅಥವಾ ಇಬ್ಬರಲ್ಲಿ ಒಬ್ಬರು ನಿಗದಿತ ವಯಸ್ಸಿನವರಾಗಿಲ್ಲದಿದ್ದರೂ ಇಂತಹ ಮದುವೆಯನ್ನು ಬಾಲ್ಯವಿವಾಹ ಎನ್ನುವರು.

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ರಾಜ್ಯ, ಜಿಲ್ಲಾ, ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯತ್ ಮತ್ತು ಗ್ರಾಮ ಮಟ್ಟದ ಅಧಿಕಾರಿಗಳನ್ನು ಹಾಗೂ ಐ.ಸಿ.ಡಿ.ಎಸ್ ಯೋಜನೆಯ ಮೇಲ್ವಿಚಾರಕಿಯರನ್ನೂ ಬಾಲ್ಯ ವಿವಾಹ ನಿಷೇಧಾಧಿಕಾರಿಗಳೆಂದು ಸರ್ಕಾರ ನೇಮಿಸಿದೆ.



## ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶಾನ

- 1993-34 ಮತ್ತು 2007-08 ರಲ್ಲಿ ನೆಡೆಸಲಾದ ಸಮೀಕ್ಷೆಯಲ್ಲಿ ಗುರುತಿಸಲಾದ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶಾನ.

- 45 ವರ್ಷ ಮೀರಿದ ಮಾಜಿ ದೇವದಾಸಿ ಮಹಿಳೆಯರಿಗೆ ಕನಿಷ್ಠ ಜೀವನ ನಡೆಸಲು ಸಹಕಾರಿಯಾಗುವಂತೆ, ಮಾಸಿಕ ಮಾಸಾಶನ ರೂ.1500/- ಗಳನ್ನು ನೀಡಲಾಗುವುದು.



# ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ನಿರ್ಮಾಣ

- ಕರ್ನಾಟಕ ರಾಜ್ಯದ 14 ಜಿಲ್ಲೆಗಳಲ್ಲಿ ನಿವೇಶನ ಹೊಂದಿರುವ ವಸತಿ ರಹಿತ ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಯೋಜನೆಯನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

- ಗ್ರಾಮೀಣ ಪ್ರದೇಶದಲ್ಲಿ ರೂ. 1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ. 2.00 ಲಕ್ಷ ಘಟಕ ವೆಚ್ಚದಲ್ಲಿ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ.



## ದೇವದಾಸಿ ಪುನರ್ವಸತಿ ಕಾರ್ಯಕ್ರಮ

- ಆರ್ಥಿಕವಾಗಿ ಮಾಜಿ ದೇವದಾಸಿಯರನ್ನು ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ರೂ. 50,000/- (ರೂ. 25,000/- ಗಳ ಬಡ್ಡಿರಹಿತ ಸಾಲ, ರೂ. 25,000/-ಗಳ ಪ್ರೋತ್ಸಾಹ ಧನ) ಗಳ ಆರ್ಥಿಕ ಸೌಲಭ್ಯವನ್ನು 6 ದಿನಗಳ ಇ.ಡಿ.ಪಿ. ತರಬೇತಿಯೊಂದಿಗೆ ಕಲ್ಪಿಸಲಾಗುತ್ತಿದೆ.

- ಜಾತ್ರಾ ಸ್ಥಳಗಳಲ್ಲಿ ಹಾಗೂ ಸಮುದಾಯದಲ್ಲಿ ಬೀದಿ ನಾಟಕಗಳ ಮೂಲಕ ಈ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಜಾಗೃತಿ ಮೂಡಿಸಲಾಗುತ್ತಿದೆ.

- ಮಾಜಿ ದೇವದಾಸಿಯರ ಆರೋಗ್ಯ ದೃಷ್ಠಿಯಿಂದ ಸರ್ಕಾರಿ ಆರೋಗ್ಯ ಕೇಂದ್ರಗಳ ಮೂಲಕ ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ ಉಚಿತ ಆರೋಗ್ಯತಪಾಸಣೆ ಮಾಡಲಾಗುತ್ತಿದೆ.



# ಮಹಿಳೆಯರಿಗೆ ಬಡ್ಡಿ ಸಹಾಯಧನ (ಇಂದಿರಾ ಯೋಜನೆ) ಯೋಜನೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೇಲ್ವಿಚಾರಕಿಯರಿಗೆ ದ್ವಿ-ಚಕ್ರ ವಾಹನ ಖರೀದಿಸಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ರೂ. 50,000/-ಗಳ ಬಡ್ಡಿ ರಹಿತ ಸಾಲವನ್ನು ನೀಡಲಾಗುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರತಿ ಮಾಹೆ ರೂ. 1000/- ಗಳನ್ನು ಇಂಧನ ವೆಚ್ಚವಾಗಿ ನೀಡಲಾಗುತ್ತಿದೆ.



# ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ನಿವಾರಣೆ

- ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ, ಬಾಲ್ಯ ವಿವಾಹ ನಿಷೇಧ ಹಾಗೂ ಸಮಗ್ರ ಮಕ್ಕಳ ರಕ್ಷಣೆಗಾಗಿ "ಗ್ರಾಮ ಪಂಚಾಯತ್ ಮಟ್ಟದಲ್ಲಿ"ರಚಿಸಲಾಗಿರುವ ಮಕ್ಕಳ ರಕ್ಷಣಾ ಸಮಿತಿಯನ್ನು ವಿಲೀನಗೊಳಿಸಿ "ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ"ಯನ್ನು ರಚಿಸಸಲಾಗಿದೆ.

- ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆಗೆ ಹಾಗೂ ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು, ಪುನರ್ವಸತಿ ಕಲ್ಪಿಸಲು ಮತ್ತು ಕುಟುಂಬದವರೊಂದಿಗೆ ಪುನರ್ ವಿಲೀನಗೊಳಿಸಲು 15 ಉಜ್ವಲ ಸ್ವಯಂ ಸೇವಾ ಸಂಸ್ಥೆಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

- ಮಾಹಿತಿಗಾಗಿ ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರನ್ನು ಹಾಗೂ ತಾಲ್ಲೂಕು ಮಟ್ಟದಲ್ಲಿ ಶಿಶುಅಭಿವೃದ್ಧಿ ಯೋಜನಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.



# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ



# ಪ್ರತಿ ತಿಂಗಳು ೯ನೇ ತಾರಿಖು

- ಪೂರ್ಣ ಪ್ರಮಾಣದ ಹಾಗೂ ಗುಣಮಟ್ಟದ ಗರ್ಭಿಣಿ ತಪಾಸಣೆ
- ಹೆರಿಗೆ ಹಾಗೂ ಸುರಕ್ಷಿತ ತಾಯ್ತನವನ್ನು ಯಶಸ್ವಿಗೊಳಿಸುವುದು
- ಗಂಡಾಂತರ ಗರ್ಭಿಣಿಯರನ್ನು ಗುರುತಿಸಿ ವಿಶೇಷ ಸೇವೆ ನೀಡುವುದು
- ಖಾಸಗಿ ವೈದ್ಯರು ಈ ಅಭಿಯಾನದಲ್ಲಿ ಸ್ವಯಂ ಪ್ರೇರಿತರಾಗಿ ಕೈಜೋಡಿಸಲು ಮನವಿ



# ತಾಯಿ ಕಾರ್ಡ್

- ಗರ್ಭಿಣಿ ಎಂದು ತಿಳಿದ ತಕ್ಷಣ ನೋಂದಾವಣಿ ಮಾಡಿ ತಾಯಿ ಕಾರ್ಡ್ ನೀಡಲಾಗುವುದು
- ತಾಯಿ ಕಾರ್ಡ್, ಸರ್ಕಾರಿ ಆಸ್ಪತ್ರೆ, ಉಪಕೇಂದ್ರ, ಅಂಗನವಾಡಿ, ಆಶಾ ಕಾರ್ಯಕರ್ತೆಯರಲ್ಲಿ ಉಚಿತವಾಗಿ ಲಭ್ಯ
- ರಾಜ್ಯದ ಯಾವುದೇ ಸಂಸ್ಥೆಗಳಲ್ಲಿ ಈ ಕಾರ್ಡನ್ನು ಬಳಸಿ ಉಚಿತ ಸೇವೆ ಪಡೆದುಕೊಳ್ಳಬಹುದು
- ಕಾಲಕಾಲಕ್ಕೆ ತಾಯಿ ಮತ್ತು ಮಕ್ಕಳು ಪಡೆಯಬೇಕಾದ ಸೇವೆಗಳ ಬಗ್ಗೆ ಮೊಬೈಲ್ ಸಂದೇಶ ರವಾನಿಸಲಾಗುವುದು



# ರಕ್ತಹೀನತೆಯನ್ನು ತಡೆಗಟ್ಟಿ

- ಸುಸ್ತು, ಎದೆನೋವು, ಬಿಳಚಿದ ಕಣ್ಣು / ಚರ್ಮ, ತಲೆಸುತ್ತು, ಜೋರಾದ ಹೃದಯ ಬಡಿತ ಮುಂತಾದವು ರಕ್ತಹೀನತೆಯ ಲಕ್ಷಣಗಳು
- ರಕ್ತಹೀನತೆಯನ್ನು ತಡೆಗಟ್ಟಲು ಕಬ್ಬಿಣಾಂಶ ಹೇರಳವಾಗಿರುವ ಸೊಪ್ಪು, ಕಾಳುಗಳು, ಬೆಲ್ಲವನ್ನು ಹೆಚ್ಚಾಗಿ ಆಹಾರದಲ್ಲಿ ಸೇವಿಸಿ
- ರಕ್ತಹೀನತೆಯನ್ನು ತಡೆಗಟ್ಟಲು ಅಂಗನವಾಡಿ, ಶಾಲಾ-ಕಾಲೇಜುಗಳಲ್ಲಿ ಉಚಿತವಾಗಿ ಕಬ್ಬಿಣಾಂಶ ಮಾತ್ರೆಗಳ ಪೂರೈಕೆ
- ಗರ್ಭಿಣಿಯರಲ್ಲಿ ರಕ್ತಹೀನತೆ ತಡೆಗಟ್ಟಲು ಉಚಿತವಾಗಿ ಕಬ್ಬಿಣ ಮತ್ತು ಫೋಲಿಕ್ ಆಮ್ಲ ಮಾತ್ರೆಗಳ ವಿತರಣೆ



# ತಾಯಿಯ ಹಾಲು ಅಮೃತ
# ತಾಯಿ ಎದೆಹಾಲಿನ ಮಹತ್ವ


- ಎದೆಹಾಲು ಕುಡಿಸುವುದರಿಂದ ಮಗುವಿನ ಸರ್ವತೋಮುಖ ಬೆಳವಣಿಗೆಯಾಗುತ್ತದೆ
- ತಾಯಿ ಎದೆಹಾಲು ಕುಡಿಸುವುದರಿಂದ ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ
- ತಾಯಿ ಎದೆಹಾಲನ್ನು ಉಣಿಸುವುದರಿಂದ ತಾಯಿಯ ಹಾಲು ಹೆಚ್ಚು ಉತ್ಪತ್ತಿಯಾಗುತ್ತದೆ
- ತಾಯಿ ಮತ್ತು ಮಗುವಿನ ಬಾಂಧವ್ಯ ವೃದ್ಧಿಯಾಗುತ್ತದೆ
- ಶಿಶು ಮರಣಗಳ ಪ್ರಮಾಣ ಕಡಿಮೆಯಾಗುತ್ತದೆ



# ಆಸ್ಪತ್ರೆಯಲ್ಲೇ ಹೆರಿಗೆಯಾಗಲಿ
# ತಾಯಿ-ಮಗು ಕ್ಷೇಮವಾಗಿರಲಿ

**ಹೆರಿಗೆ ಸಮಯದಲ್ಲಿ ಅನಿರೀಕ್ಷಿತ ತೊಂದರೆಗಳಾಗಬಹುದು**

- ಅಡ್ಡಗಟ್ಟಿದ ಹೆರಿಗೆ
- ಅಧಿಕ ರಕ್ತಸ್ರಾವ
- ನಂಜು
- ಗರ್ಭಕೋಶ ಬಿರಿಯುವಿಕೆ
- ಮಗುವಿಗೆ ಉಸಿರಾಟದ ತೊಂದರೆ
- ಇಂತಹ ಸಮಸ್ಯೆಗಳ ನಿರ್ವಹಣೆಗೆ ಆಸ್ಪತ್ರೆಯೇ ಬೇಕು



# ತಾಯಿಯ ಹಾಲು ಅಮೃತ
# ತಾತಿ ಎದೆಹಾಲು ಉಣಿಸುವುದು

- ಮಗು ಹುಟ್ಟಿದ ಅರ್ಧ ಘಂಟೆಯೊಳಗೆ ಎದೆಹಾಲು ಉಣಿಸುವುದನ್ನು ಪ್ರಾರಂಭಿಸಿ, ಇದರಿಂದ ಮಗುವಿನಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ

- ಮಗುವಿಗೆ ಆರು ತಿಂಗಳು ತುಂಬುವವರೆಗೆ ಎದೆ ಹಾಲನ್ನಲ್ಲದೇ ಬೇರೆ ಏನನ್ನೂ ಕೊಡಬೇಡಿ

- ಮಗುವಿಗೆ ಆರು ತಿಂಗಳು ತುಂಬಿದ ನಂತರ ಎದೆಹಾಲಿನ ಜೊತೆಗೆ ಪೂರಕ ಆಹಾರವನ್ನು ಪ್ರಾರಂಭಿಸಿ

- ಮಗುವಿಗೆ ಎರಡು ವರ್ಷ ತುಂಬುವವರೆಗೆ ಪೂರಕ ಆಹಾರದ ಜೊತೆಗೆ ಎದೆಹಾಲು ಉಣಿಸುವುದನ್ನು ಮುಂದುವರೆಸಿ



# ನವಜಾತ ಶಿಶುಗಳ ಆರೈಕೆ

- ನವಜಾತ ಶಿಶು ತೀವ್ರನಿಗಾ ಘಟಕಗಳು
- ರೇಡಿಯೆಂಟ್ ವಾರ್ಮರ್ ಗಳ ಸೇವೆ
- ಮಕ್ಕಳ ಅಪೌಷ್ಠಿಕತೆಯನ್ನು ತಡೆಗಟ್ಟಲು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪೌಷ್ಠಿಕ ಆಹಾರ ಪುನಶ್ಚೇತನ ಕೇಂದ್ರಗಳು (ಎನ್.ಆರ್.ಸಿ)



# ಕಾಂಗರೂ ಮಾದರಿ ಆರೈಕೆ
# ವೆಚ್ಚವಿಲ್ಲದ ಬೆಚ್ಚನೆಯ ಆರೈಕೆ

- ಮಗುವಿನ ತೂಕ ಹೆಚ್ಚಿಸಲು ಸಹಕಾರಿ
- ಸಹಜ ಉಸಿರಾಟಕ್ಕೆ ಸಹಾಯ
- ತಾಯಿ-ಮಗುವಿನ ಬಾಂಧವ್ಯ ವೃದ್ಧಿ



# ಸಂಜೀವಿನಿ

## ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ(NRLM)



**ಸಮುದಾಯ ಆಧಾರಿತ ಸಂಸ್ಥೆಗಳ ರಚನೆ** : ಪ್ರಧಾನ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಂದ (MCRP)ಸ್ವ ಸಹಾಯ ಸಂಘದಿಂದ ಹೊರಗುಳಿದ ಕುಟುಂಬಗಳ ಸಮೀಕ್ಷೆ ಮಾಡುವುದರ ಮೂಲಕ ಹೊಸ ಸ್ವ ಸಹಾಯ ಸಂಘಗಳ ರಚನೆ ಮಾಡಲಾಗುವುದು.

ಈ ಕೆಳಗೆ ತಿಳಿಸಿರುವಂತೆ 4 ಹಂತದಲ್ಲಿ ಸಂಸ್ಥೆಗಳ ರಚನೆ ಮತ್ತು ಬಲವರ್ಧನೆ ಮಾಡಲಾಗುವುದು.

- **ಸ್ವ ಸಹಾಯ ಸಂಘ** (SHG) **:** ಸ್ವ ಸಹಾಯ ಸಂಘವು ಮೊದಲ ಹಂತದ ಸಂಸ್ಥೆಯಾಗಿದ್ದು, 10 ರಿಂದ 20 ಸದಸ್ಯರನ್ನು ಒಳಗೊಂಡಿರುತ್ತದೆ.
- **ವಾರ್ಡ ಮಟ್ಟದ ಒಕ್ಕೂಟ** : ಎರಡನೇಯ ಹಂತದ ಸಮುದಾಯ ಸಂಸ್ಥೆಯಾಗಿದ್ದು, 5 ರಿಂದ 20 ಸ್ವ ಸಹಾಯ ಸಂಘಗಳನ್ನು ಒಳಗೊಂಡಿರುತ್ತದೆ. ಸಾಮಾಜಿಕ ಒಗ್ಗೂಡಿಸುವಿಕೆ ಮತ್ತು ಸ್ವ ಸಹಾಯ ಸಂಘಗಳ ಸಾಮರ್ಥ್ಯ ಬಲವರ್ಧನೆಯ ಜವಾಬ್ದಾರಿಯನ್ನು ಹೊಂದಿರುತ್ತದೆ.
- **ಗ್ರಾಮ ಪಂಚಾಯತ ಮಟ್ಟದ ಒಕ್ಕೂಟ** : 3ನೇ ಹಂತದ ಸಮುದಾಯ ಸಂಸ್ಥೆ ಇದಾಗಿದೆ. ಸ್ವ ಸಹಾಯ ಸಂಘಗಳಿಗೆ ಸಮುದಾಯ ಬಂಡವಾಳ ನಿಧಿ ಹಂಚಿಕೆ ಮತ್ತು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಅಭಿವೃದ್ಧಿಗೊಳಿಸುವುದು ಇದರ ಪ್ರಮುಖ ಪಾತ್ರವಾಗಿದೆ. ಗ್ರಾಮ ಪಂಚಾಯತ ಮಟ್ಟದ ಒಕ್ಕೂಟದ ಇನ್ನೊಂದು ಜವಾಬ್ದಾರಿ ಸ್ವ ಸಹಾಯ ಸಂಘಗಳ ಸಾಮರ್ಥ್ಯ ಬವರ್ಧನೆ ಮತ್ತು ಬ್ಯಾಂಕ ಸಂಪರ್ಕವೇರ್ಪಡಿಸುವುದಾಗಿದೆ. ಗ್ರಾಮ ಪಂಚಾಯತ ಮಟ್ಟದ ಕಾರ್ಯಕ್ರಮಗಳ ಹಾಗೂ ಸಾಮಾಜಿಕ ಸೌಲಭ್ಯಗಳ ಅಭಿಗಮನ ಇದರ ಜವಾಬ್ದಾರಿಯಾಗಿದೆ.
- **ತಾಲೂಕ ಮಟ್ಟದ ಒಕ್ಕೂಟ :** 4 ನೇ ಹಂತದ ಸಮುದಾಯ ಸಂಸ್ಥೆ ಇದಾಗಿದೆ. ಇದರ ಪಾತ್ರ ಮುಖ್ಯವಾಗಿ ವಕಾಲತ್ತು ಮತ್ತು ಅಭಿಗಮನಕ್ಕೆ ಸಂಬಂಧಿಸಿದೆ.
- **ಪ್ರಧಾನ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಮತ್ತು ಜವಬ್ದಾರಿಗಳು :** ಸಮುದಾಯದ ಜನರನ್ನು ಸಮುದಾಯದವರೇ ಒಗ್ಗೂಡಿಸುವ ಸಲುವಾಗಿ ಸಮುದಾಯದಿಂದ ಪ್ರಧಾನ  ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆಮಾಡಿ, ಅವರಿಗೆ 06 ದಿನಗಳ ತರಬೇತಿ ನೀಡಲಾಗುದು. ಪ್ರಧಾನ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಸಮುದಾಯದಲ್ಲಿ ಮಾದರಿ ವ್ಯಕ್ತಿಗಳಾಗಿ ಸ್ವಸಹಾಯ ಸಂಘಗಳ ಹಾಗೂ ಒಕ್ಕೂಟಗಳ ರಚನೆ ಮತ್ತು ಬಲವರ್ಧನೆಯಲ್ಲಿ ಕಾರ್ಯನಿರ್ವಹಿಸುವದಾಗಿರುತ್ತದೆ.

# ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದಿಂದ ರಚಿಸಲಾದ ಸ್ವಸಹಾಯ ಸಂಘಗಳಿಗೆ ನೀಡಲಾಗುವ ವಿವಿಧ ಆರ್ಥಿಕ ಬೆಂಬಲ:

- ಪ್ರತಿಯೊಂದು ಸ್ವಸಹಾಯ ಸಂಘಕ್ಕೆ ಗರಿಷ್ಟ ರೂ 15,000/-ಗಳ ವರೆಗೆ ಸುತ್ತುನಿಧಿ ನೀಡಲಾಗುವುದು.
- ಸಮುದಾಯ ಬಂಡವಾಳ ನಿಧಿ(Community Investment Fund-CIF): ಸ್ವಸಹಾಯ ಸಂಘಗಳ ಸದಸ್ಯರಿಗೆ ಅವರ ಜೀವನೋಪಾಯ ಮತ್ತು ದುರ್ಬಲತೆಯನ್ನು ಕಡಿಮೆ ಮಾಡಲು ಪ್ರತೀ ಸದಸ್ಯರಿಗೆ ರೂ 25,000/ ರಂತೆ ಪ್ರತೀ ಸಂಘಕ್ಕೆ ಗರಿಷ್ಟ ರೂ 2,50,000/-ಗಳವರೆಗೆ- ಅಲ್ಪಸಂಖ್ಯಾತರು ಮತ್ತು ಇತರರಿಗೆ ರೂ75,000/-ಗಳು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ವಿಕಲಲಚೇತನರಿಗೆ ರೂ 1,25,000/-ಗಳು, ಅಕಾಲಿಕ ಬುಡಕಟ್ಟು ಜನಾಂಗಗಳಿಗೆ ರೂ 2,50,000/-ಗಳು ಬೆಂಬಲ ನೀಡಲಾಗುವುದು.
- ಸ್ವಸಹಾಯ ಸಂಘಗಳ ಸದಸ್ಯರ, ಒಕ್ಕೂಟಗಳ ಮತ್ತು ಕಾರ್ಯಕರ್ತರ ಸಾಮರ್ಥ್ಯಾಭಿವೃದ್ಧಿಗಾಗಿ ಪ್ರತೀ ಸದಸ್ಯರಿಗೆ ರೂ 7,500/ಗಳ ವರೆಗೆ ವೆಚ್ಚಮಾಡಲಾಗುವುದು.
- ಸ್ವಸಹಾಯ ಸಂಘಗಳ ಮತ್ತು ಒಕ್ಕೂಟಗಳ ರಚನೆಗೆಗಾಗಿ ಪ್ರಾರಂಬಿಕವಾಗಿ ಪ್ರತೀ ಸ್ವಸಹಾಯ ಸಂಘಕ್ಕೆ ರೂ 10,000/ಗಳವರೆಗೆ ಭರಿಸಲಾಗುವುದು.
- ಸ್ವಸಹಾಯ ಸಂಘಗಳಿಗೆ ಬ್ಯಾಂಕ್‌ನಿಂದ ರೂ 3,00,000/ವರೆಗೆ ಸಾಲಪಡೆಯಲು ಹಾಗೂ ತ್ವರಿತ ಮರುಪಾವತಿಗೆ ಉತ್ತೇಜಿಸಲು ವಾರ್ಷಿಕ 7%ರಷ್ಟು ವರೆಗೆ ಬಡ್ಡಿಸಹಾಯಧನ (Interest subvention) ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ವಾರ್ಷಿಕ 4%ರಷ್ಟು ಹೆಚ್ಚುವರಿಯಾಗಿ ಬಡ್ಡಿಯ ಸಹಾಯಧನ ನೀಡಲಾಗುವುದು.
- ಕಿರು ಉದ್ದಿಮೆಗಳಿಗೆ ಸಾಲ ಮತ್ತು ಮಾರುಕಟ್ಟೆ ವ್ಯವಸ್ಥೆ ಮಾಡಲಾಗುವುದು.
- ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ, ಆರ್‌ಸೇಟಿ/ರೂಡ್‌ಸೇಟಿ ಮೂಲಕ ಗ್ರಾಮೀಣ ನಿರುದ್ಯೋಗಿ ಯುವಕ/ಯುವತಿಯರಿಗೆ ಕೌಶಲ್ಯ ತರಬೇತಿ ನೀಡಲಾಗುವುದು.



## ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ

- ಗ್ರಾಮೀಣ ಭಾಗದ ಯುವಕ/ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಹಿನ್ನಲೆಯಲ್ಲಿ ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಆರಂಭಿಸಲಾಗಿದೆ.
- ನಿಯಮಾನುಸಾರ 18 ರಿಂದ 35 ವಯಸ್ಸಿನ ಪರಿಶಿಷ್ಟಜಾತಿ, ಪರಿಶಿಷ್ಟವರ್ಗ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗ, ವಿಕಲಚೇತನರು ಲಿಂಗ ಪರಿವರ್ತನೆಗೊಂಡವರು, ಮಹಿಳೆಯರು ಒಳಗೊಂಡಿರುತ್ತಾರೆ.
- ನಿರುದ್ಯೋಗಿ ಯುವಕ/ಯುವತಿಯರಿಗೆ ಉಚಿತ ತರಬೇತಿಯ ಜೊತೆ ಉದ್ಯೋಗ ಕಲ್ಪಿಸುವುದು.
- ಯೋಜನಾ ಅನುಷ್ಠಾನ ಸಂಸ್ಥೆಗಳು ಅರ್ಹ ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಂಡು, ವಿವಿಧ ತರಬೇತಿ ಘಟಕಗಳ ಬಗ್ಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಿ ನಂತರ ಉದ್ಯೋಗಾವಕಾಶ ಕಲ್ಪಿಸಿ, ಫಲಾನುಭವಿಗಳು ಉದ್ಯೋಗದಲ್ಲಿ ಮುಂದುವರಿಯು ಬಗ್ಗೆ ನಿಗಾ ವಹಿಸಲಾಗುವುದು.
- ವಸತಿರಹಿತ ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯೊಂದಿಗೆ ಪ್ರಯಾಣ ವೆಚ್ಚವನ್ನು ಭರಿಸಲಾಗುವುದು.

  ವಸತಿಸಹಿತ ತರಬೇತಿ ಸಮಯದಲ್ಲಿ ಉಚಿತ ಊಟ ಮತ್ತು ವಸತಿ ಕಲ್ಪಿಸಲಾಗುವುದು



## ಅರ್ಹತೆ

- ಕನಿಷ್ಠ 8 ರಿಂದ 12ನೇ ತರಗತಿ ಓದಿರುವ ನಿರುದ್ಯೋಗಿ ಯುವಕ/ಯುವತಿಯರು
- ವಯೋಮಿತಿ; 18 ರಿಂದ 35 ವರ್ಷಗಳು
- ಎಲ್ಲಾ ಅರ್ಹ ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪರೀಕ್ಷೆ ಮತ್ತು ಸಂದರ್ಶನಕ್ಕೆ ಹಾಜರಾಗಬೇಕು.
- ಶೇಕಡ 45% ಎಸ್.ಸಿ, ಶೇಕಡ 20% ಅಲ್ಪಸಂಖ್ಯಾತರು ಮತ್ತು ಒಟ್ಟಾರೆ ಶೇಕಡ 40% ಮಹಿಳೆಯರಿಗೆ ಮೀಸಲಾತಿ ಆದ್ಯತೆ ನೀಡಲಾಗುವುದು

## ಈ ತರಬೇತಿಗೆ ಸೇರಲು ಅಗತ್ಯ ದಾಖಲಾತಿಗಳು

- ಅಂಕಪಟ್ಟಿ/ವರ್ಗಾವಣಾ ಪ್ರಮಾಣ ಪತ್ರ
- ಜಾತಿ ಪ್ರಮಾಣ ಪತ್ರ
- ಬಿ.ಪಿ.ಎಲ್ ರೇಷನ್ ಕಾರ್ಡ್, ಆಧಾರ್ ಕಾರ್ಡ್
- ಇತ್ತೀಚೆಗಿನ 6 ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ (6 ತಿಂಗಳ ಒಳಗೆ ತೆಗೆದಿರುವುದು)
- ಭಾವ ಚಿತ್ರವಿರುವ ಬ್ಯಾಂಕ್ ಪಾಸ್ ಬುಕ್



# ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ

ಸ್ವಯಂ ಉದ್ಯೋಗದ ಮೂಲಕ ಮಹಿಳೆಯರನ್ನು ಸಬಲೀಕರಣ ಗೊಳಿಸುವ ಎನ್‌ಆರ್‌ಎಲ್‌ಎಂನ ಅಡಿಯಲ್ಲಿ ಸಂಜೀವಿನಿ- ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಕಾರ್ಯಕ್ರಮಗಳು (ಕೆಎಸ್‌ಆರ್‌ಎಲ್‌ಪಿಎಸ್)



## 1. ಸ್ಟಾರ್ಟ್ ಅಪ್ ಗ್ರಾಮೀಣ ಉದ್ಯಮಶೀಲತೆ ಕಾರ್ಯಕ್ರಮ (SVEP)

- ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸ್ಥಳೀಯ ಉದ್ಯಮಗಳನ್ನು ಸ್ಥಾಪಿಸಲು ಬೆಂಬಲ.

- ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಗಾಗಿ ಸಮಗ್ರ ಐಸಿಟಿ ತಂತ್ರಗಳು ಮತ್ತು ಸಾಧನಗಳ ಅಳವಡಿಕೆ.

- ಗ್ರಾಮಗಳಲ್ಲಿ ಉದ್ಯಮಶೀಲತೆ ಉತ್ತೇಜಿಸಲು ಸುಸ್ಥಿರ ಮಾದರಿ ಮತ್ತು ಬ್ಯಾಂಕುಗಳು / ಸ್ವಸಹಾಯ ಗುಂಪುಗಳು ಮತ್ತು ಒಕ್ಕೂಟಗಳಿಗೆ ಸಾಲವನ್ನು ಒದಗಿಸುವುದು.



## 2. ಅಜೀವಿಕಾ ಗ್ರಾಮೀಣ ಎಕ್ಸ್‌ಪ್ರೆಸ್ ಯೋಜನೆ (AGEY)

- ಮಾರುಕಟ್ಟೆಗಳು, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯಲು ಸಾರಿಗೆ ಸೇವೆಯ ಸಹಾಯ.

- ಸುರಕ್ಷಿತ, ಕೈಗೆಟುಕುವ ಮತ್ತು ಗ್ರಾಮೀಣ ಪ್ರದೇಶಗಳಿಗೆ ಅನುಕೂಲವಾಗುವಂತೆ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ಮೇಲ್ವಿಚಾರಣೆಯ ಸಾರ್ವಜನಿಕ ಸಾರಿಗೆ ಸೇವೆಗಳನ್ನು ನಿರ್ವಹಿಸುವುದು.

- ಸ್ವಸಹಾಯ ಗುಂಪುಗಳ ಸದಸ್ಯರಿಗೆ ಪರ್ಯಾಯ ಜೀವನೋಪಾಯದ ಮೂಲವನ್ನು ಒದಗಿಸುವುದು.



## ೩. ಕ್ಷೀರ ಸಂಜೀವಿನಿ

- ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್‌ಗಳಿಂದ ಸಾಲ ಮತ್ತು ನಿಗಮದ ಮೂಲಕ ಸಹಾಯಧನ ನೀಡಲಾಗುವುದು.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ರೂ. 1.00 ಲಕ್ಷ ಮೇಲ್ಪಟ್ಟು ರೂ. 3.00 ಲಕ್ಷದವರೆಗೆ ಇರುವ ಪ್ರಕರಣಗಳಲ್ಲಿ ನಿಗಮದಿಂದ ಸಹಾಯದನದ ಮೊತ್ತ ಶೇ 50 ರಷ್ಟು ಅಥವಾ ಗರಿಷ್ಟ ರೂ. 1.50 ಲಕ್ಷ ನೀಡಲಾಗುವುದು. ಕುಟುಂಬದ ವಾರ್ಷಿಕ ಆದಾಯವನ್ನು ಗರಿಷ್ಟ ರೂ. 2.00 ಲಕ್ಷಗಳಿಗೆ ಮಿತಿಗೊಳಿಸಿದೆ.

- ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಮಹಿಳೆಯರಿಗೆ ಯೋಜನಾ ವೆಚ್ಚ ರೂ. 1.00 ಲಕ್ಷದಿಂದ ರೂ. 3.00 ಲಕ್ಷಗಳವರೆಗೆ, ಶೇ. 30 ರಷ್ಟು ಅಥವಾ ಗರಿಷ್ಠ ರೂ. 90,000/- ಗಳ ಸಹಾಯ ಧನ ನೀಡಲಾಗುವುದು ಸಾಮಾನ್ಯ ವರ್ಗದವರ ಕುಟುಂಬದ ವಾರ್ಷಿಕ ಆದಾಯವನ್ನು ಗರಿಷ್ಠ ರೂ. 1.50 ಲಕ್ಷಗಳಿಗೆ ಮಿತಿಗೊಳಿಸಿದೆ.

- ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ವರ್ಷ ಮೇಲ್ಪಟ್ಟು ಗರಿಷ್ಠ 55 ವರ್ಷದೊಳಗಿರಬೇಕು.

- ಸಾಲ ಮಂಜೂರಾದ ನಂತರ ಸಾಲ ಬಿಡುಗಡೆ ಮುನ್ನ ಈ ಯೋಜನೆಯ ಅರ್ಹ ಫಲಾನುಭವಿಗಳಿಗೆ 3 ರಿಂದ 6 ದಿನಗಳವರೆಗೆ ಉದ್ಯಮಶೀಲತಾ ತರಬೇತಿ ನೀಡಲಾಗುವುದು.



# ವನ ಧನ್ ವಿಕಾಸ್‌ಕೇಂದ್ರ (VDVK)

- ಪ್ರಧಾನ ಮಂತ್ರಿ ವನಧನ್‌ಯೋಜನೆ (PMVDY)ಯು ಅರಣ್ಯ ಉತ್ಪನ್ನಗಳ ಮೇಲೆ ಅವಲಂಬಿತವಾಗಿರುವ ಎಲ್ಲಾ ಫಲಾನುಭವಿಗಳನ್ನು ಒಳಗೊಂಡಿರುತ್ತದೆ.

- ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಅರಣ್ಯ ಪ್ರದೇಶಗಳ ಸಮೀಪ ವಾಸಿಸುವ ಗ್ರಾಮಸ್ಥರಿಗೆ ಅನುಕೂಲವಾಗುವಂತೆ ಟ್ರೈಫೆಡ್ ಮತ್ತು ಬುಡಕಟ್ಟು ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ವನ ಧನ್ ವಿಕಾಸ್ ಕೇಂದ್ರ ಸ್ಥಾಪಿಸುತ್ತಿದೆ.

- ತಾಲ್ಲೂಕುಗಳ ವ್ಯಾಪ್ತಿಗೆ ಒಳಪಡುವ ಅರಣ್ಯ ಪ್ರದೇಶಗಳಲ್ಲಿ ಕಿರು ಅರಣ್ಯ ಉತ್ಪಾದನೆಯ ಲಭ್ಯತೆಗೆ ಸಂಬಂಧಿಸಿದಂತೆ ಆಯ್ಕೆ ಮಾಡಲಾದ ಗ್ರಾಮ ಪಂಚಾಯಿತಿಗಳಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

- ಈ ಕೇಂದ್ರಗಳನ್ನು ಲ್ಯಾಂಪ್ ಸೊಸೈಟಿ, ಕೆಎಸ್‌ಅರ್‌ಎಲ್‌ಪಿಎಸ್, ಟ್ರೈಫೆಡ್ ಇತ್ಯಾದಿಗಳಿಂದ ಸಹಾಯಪಡೆಯುವ ಸಮುದಾಯದ ಸದಸ್ಯರು ಸಂಗ್ರಹಿಸಿದ ಉತ್ಪನ್ನಗಳಿಗೆ ಮೌಲ್ಯವನ್ನು ಸೇರಿಸುವ ಸಲುವಾಗಿ ನಿಯಂತ್ರಿಸುತ್ತಾರೆ ಮತ್ತು ನಡೆಸುತ್ತಾರೆ.



## 5. ಒನ್ ಜಿಪಿ ಒನ್ ಬ್ಯಾಂಕಿಂಗ್ ಕರೆಸ್ಪಾಂಡೆನ್ಸ್(BC) ಸಖಿ ಅಭಿಯಾನ:

- ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ರುಡ್ಸೆಟಿಗಳ ಸಹಯೋಗದೊಂದಿಗೆ ಕೆಎಸ್ಆರ್-ಎಲ್‌ಪಿಎಸ್ ಸಂಸ್ಥೆಯು ಸ್ವಸಹಾಯ ಗುಂಪುಗಳ ಮಹಿಳೆಯರಿಗಾಗಿ ಈ ಅಭಿಯಾನ.

- ಅಭಿಯಾನದ ಅಡಿಯಲ್ಲಿ ರಾಜ್ಯದಾದ್ಯಂತ ಸ್ವಸಹಾಯ ಗುಂಪಿನ ಮಹಿಳೆಯರಿಗೆ ಬಿ.ಸಿ.ಸಖಿಗಳಾಗಿ ನಿಯೋಜನೆಗೊಳ್ಳಲು ಗುರುತಿಸಲ್ಪಟ್ಟಿದೆ.

- ಸಖಿಗಳನ್ನು ಗುರುತಿಸಿ ತರಬೇತಿ ನೀಡಲಾಗುತ್ತಿದೆ.

- ಕೃಷಿ ಇಡಿಪಿಗಳು, ಉತ್ಪನ್ನ ಇಡಿಪಿಗಳು, ಸಾಮಾನ್ಯ ಇಡಿಪಿಗಳು, ಪ್ರಕ್ರಿಯೆ ಇಡಿಪಿಗಳು ಮತ್ತು ಕೌಶಲ್ಯ ನವೀಕರಣ ಕಾರ್ಯಕ್ರಮಗಳು ಮತ್ತು ಬೆಳವಣಿಗೆಯ ಕಾರ್ಯಕ್ರಮಗಳಿಗೆ ಸೀಮಿತವಾಗಿರದ 61 ಟ್ರೇಡ್ಸ್‌ಗಳಲ್ಲಿ ಆರ್‌ಸೆಟಿಗಳಿಂದ ಬಿಪಿಎಲ್ ಕುಟುಂಬಗಳಿಗೆ ತರಬೇತಿ ನೀಡಲಾಗುವುದು.



# ೬. ಒನ್ ಸ್ಟಾಪ್ ಫೆಸಿಲಿಟಿ (ಓಎಸ್‌ಎಫ್) ಕೇಂದ್ರ

- ವಿಶ್ವಬ್ಯಾಂಕ್‌ನಿಂದ ಧನಸಹಾಯ ಪಡೆದ ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆಯ (ಎನ್‌ಆರ್‌ಇಟಿಪಿ) ಅಡಿಯಲ್ಲಿ ಒಂದು ಉಪ ಘಟಕ.

- ತಾಲೂಕಿನಲ್ಲಿ ವ್ಯಾಪಾರ ಸೌಲಭ್ಯ ಮತ್ತು ಇನ್‌ಕ್ಯೂಬೇಷನ್ ಕೇಂದ್ರ ಸ್ಥಾಪಿಸುವುದು.

- ತಾಲ್ಲೂಕು ಮಟ್ಟದಲ್ಲಿ ಬೆಳವಣಿಗೆಯ ಹಾದಿಯಲ್ಲಿರುವ ಅಸ್ತಿತ್ವದಲ್ಲಿರುವ ಉದ್ಯಮಗಳಿಗೆ ವ್ಯಾಪಾರ ಅಭಿವೃದ್ಧಿ ಸೇವೆಗಳನ್ನು ಒದಗಿಸುವುದು.

- ಗುರುತಿಸಲಾದ ಉದ್ಯಮಗಳನ್ನು ಸಮುದಾಯದಿಂದತರಬೇತಿ ಪಡೆಯುವ ವ್ಯಾಪಾರಅಭಿವೃದ್ಧಿ ಸೇವಾ ಪೂರೈಕೆದಾರರಿಂದ (ಬಿಡಿಎಸ್‌ಪಿ) ಬೆಂಬಲಿಸುವುದು.



# ಶಿಕ್ಷಣ ಇಲಾಖೆವತಿಯಿಂದ ಹೆಣ್ಣು ಮಕ್ಕಳಿಗೆ ಅನುಕೂಲವಾಗುವಂತ ಯೋಜನೆಗಳು



# ಉಚಿತ ಸಮವಸ್ತ್ರ

1 ರಿಂದ 10 ನೇ ತರಗತಿವರೆಗಿನ ಹೆಣ್ಣುಮಕ್ಕಳಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಉಚಿತ ಸಮವಸ್ತ್ರ ನೀಡಲಾಗುವುದು.



# ಉಚಿತ ಪಠ್ಯಪುಸ್ತಕ

1 ರಿಂದ 10 ನೇ ತರಗತಿವರೆಗಿನ ಹೆಣ್ಣುಮಕ್ಕಳಿಗೆ ಕರ್ನಾಟಕ ರಾಜ್ಯ ಪಠ್ಯಪುಸ್ತಕ  ಸಂಘ ವತಿಯಿಂದ ಸಿಧಪಡಿಸುವ ಉಚಿತ ಪಠ್ಯಪುಸ್ತಕ ಮತ್ತು ಅಭ್ಯಾಸ ಪುಸ್ತಕಗಳನ್ನು ನೀಡಲಾಗುವುದು.



# ಉಚಿತ ಬೈಸಿಕಲ್

೮ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ನೀಡಲಾಗುವುದು. ( ವಸತಿ ಶಾಲೆಗಳಲ್ಲಿನ  ಹೆಣ್ಣುಮಕ್ಕಳು ಮತ್ತು ಉಚಿತ ಬಸ್ ಪಾಸ್ ಪಡೆದವರನ್ನು ಹೊರತುಪಡಿಸಿ)



# ಶಾಲಾ ಶುಲ್ಕ ವಿನಾಯಿತಿ

1 ರಿಂದ 12ನೇ ತರಗತಿವರೆಗಿನ ಹೆಣ್ಣುಮಕ್ಕಳಿಗೆ ಶಾಲಾ ಶುಲ್ಕ ವಿನಾಯಿತಿ ಮತ್ತು ಪರೀಕ್ಷಾ ಶುಲ್ಕ ವಿನಾಯಿತಿ ಇರುತ್ತದೆ.



## ಉಚಿತ ಶೂ ಮತ್ತು ಸಾಕ್ಸ್

ಎಲ್ಲಾ ಶಾಲಾ ಹೆಣ್ಣುಮಕ್ಕಳಿಗೆ ಉಚಿತ ಶೂ ಮತ್ತು ಸಾಕ್ಸ್ ನೀಡಲಾಗುವುದು.



# ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆಜಿಬಿವಿ)

- ೬ನೇ ತರಗತಿಯಿಂದ ೮ನೇ ತರಗತಿವರೆಗೆ ಹೆಣ್ಣುಮಕ್ಕಳಿಗೆ ವಿದ್ಯಾಬ್ಯಾಸಕ್ಕೆ ವಸತಿಶಾಲೆಗಳನ್ನು ಪ್ರಾರಂಬಿಸಲಾಗಿದೆ.

- ರಾಜ್ಯದಲ್ಲಿ 71 ಕೆಜಿಬಿವಿಗಳನ್ನು ಶೈಕ್ಷಣಿಕವಾಗಿ ಹಿಂದುಳದ ೬೯ ಬ್ಲಾಕ್ಗಳಲ್ಲಿ ನಡೆಸಲಾಗುತ್ತಿದೆ.

- ವಸತಿ ವ್ಯವಸ್ಥೆ, ತರಗತಿ ಕೊಠಡಿ, ಗಣಕಯಂತ್ರ,ಕ್ರೀಡೆ, ಸ್ವಯಂ ರಕ್ಷಣೆ, ವೈದ್ಯಕೀಯ ತಪಾಸಣೆ, ದೈನಂದಿನ ಕ್ರಿಯೆಗಳಿಗೆ ಬೇಕಾದ ಸೌಕರ್ಯದೊಂದಿಗೆ ಶಿಕ್ಷಣ ನೀಡಲಾಗುವುದು.

- ಪ್ರತೀ ಹೆಣ್ಣುಮಗುವಿಗೆ ತಿಂಗಳಿಗೆ ರೂ೨೦೦/-ರಂತೆ ವಿದ್ಯಾರ್ಥಿ ವೇತನ ಸಹ ನೀಡಲಾಗವುದು.



# ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ

- ಡಾ: ನಂಜುಂಡಪ್ಪ ವರದಿ ಪ್ರಕಾರ 86 ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್ಗಳಲ್ಲಿ ಪರಿಶಿಷ್ಟ ಜಾತಿ,, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ವಿದ್ಯಾರ್ಥಿನಿಯರುಗಳಿಗೆ ಸೌಲಭ್ಯ ನೀಡಲು ವಸತಿಶಾಲೆಗಳನ್ನು ಪ್ರಾರಂಬಿಸಲಾಗಿದೆ.

- ಗುಣಮಟ್ಟದ ಆಹಾರ, ಪೂರಕ ಕಲಿಕಾ ಕ್ರಮಗಳಿಗೆ ವ್ಯವಸ್ಥೆ, ವೈದ್ಯಕೀಯ ತಪಾಸಣೆ, ವಿದ್ಯಾರ್ಥಿಗಳಿಗೆ ದೈನಂದಿನ ಕ್ರಿಯೆಗಳಿಗೆ ಬೇಕಾದ ಸಾಮಾಗ್ರಿಗಳನ್ನು ನೀಡಲಾಗುವುದು.



## ಬಾಲಕಿಯರ ವಸತಿನಿಲಯಗಳು

- ಶೈಕ್ಷಣಿಕವಾಗಿ ಹಿಂದುಳಿದ 74 ಬ್ಲಾಕ್ಗಳಲ್ಲಿ ಸ್ಥಾಪನೆ ಮಾಡಲಾಗಿದೆ.
- ಗುಣಮಟ್ಟದ ಆಹಾರ, ಪೂರಕ ಕಲಿಕಾ ಕ್ರಮಗಳಿಗೆ ವ್ಯವಸ್ಥೆ, ವೈದ್ಯಕೀಯ ತಪಾಸಣೆ, ವಿದ್ಯಾರ್ಥಿಗಳಿಗೆ ದೈನಂದಿನ ಕ್ರಿಯೆಗಳಿಗೆ ಬೇಕಾದ ಸಾಮಾಗ್ರಿಗಳನ್ನು ನೀಡಲಾಗುವುದು.



# ಶಿಕ್ಷಕರ ನೇಮಕಾತಿಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ

ಪ್ರಾಥಮಿಕ ಶಾಲೆಗಳಿಗೆ ನೇಮಕಾತಿಯಲ್ಲಿ ಮಹಿಳಾ ಶಿಕ್ಷಕರಿಗೆ 50% ರಷ್ಟು ಮೀಸಲಾತಿ ನೀಡಲಾಗುತ್ತಿದೆ.



## ಹೆಚ್.ಐ.ವಿ. ಪೀಡಿತರಿಗೆ ಸೇವೆಗಳು

## ಅನಾಥರು ಮತ್ತು ಬಾಧಿತ ಮಕ್ಕಳು (OVC)

- ಹೆಚ್.ಐ.ವಿ.ಸೋಂಕಿನಿಂದ ಬಳಲುತ್ತಿರುವ ಮಕ್ಕಳು ಹಾಗು ಹೆಚ್.ಐ.ವಿ. ಸೋಂಕಿತ ಪೋಷಕರ ಮಕ್ಕಳನ್ನು ಬಾಧಿತ ಮಕ್ಕಳೆಂದು ಪರಿಗಣಿಸಿ "ವಿಶೇಷ ಪಾಲನಾ ಯೋಜನೆ"ಯಡಿ ಸೌಲಭ್ಯಒದಗಿಸಲಾಗುತ್ತಿದೆ.

- ಅನಾಥರು–ಏಡ್ಸ್‌ನಿಂದ ಮರಣ ಹೊಂದಿದ ತಂದೆ–ತಾಯಿಯರ 0–18 ವರ್ಷದೊಳಗಿನ ಮಕ್ಕಳು.

- ಮಕ್ಕಳ ವಿದ್ಯಾಭ್ಯಾಸ, ಪೌಷ್ಟಿಕ ಆಹಾರ, ಆರೋಗ್ಯ ಸುಧಾರಣೆಗಾಗಿ ಈ ಯೋಜನೆಯಡಿ ಮಕ್ಕಳಿಗೆ ಮಾಸಿಕ ರೂ.1,000/– ಗಳಂತೆ 18 ವರ್ಷ ಪೂರ್ಣಗೊಳ್ಳುವವರೆಗೆ ಧನ ಸಹಾಯ ನೀಡಲಾಗುವುದು.



# ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಸ್ತ್ರೀ ಸಬಲೀಕರಣಕ್ಕಾಗಿ 2021 ಜನವರಿ 15 ರಿಂದ ಮಹಿಳಾ ಕಾಯಕ ಶಕ್ತಿ ಅಭಿಯಾನ.

- ಅಭಿಯಾನದಡಿ ಮಹಿಳಾ ಕೂಲಿಕಾರರ ಭಾಗವಹಿಸುವಿಕೆ ಹೆಚ್ಚಳದ ಗುರಿ .

- ಗಂಡು ಹೆಣ್ಣಿಗೆ ಸಮಾನ ಕೆಲಸಕ್ಕೆ ಸಮಾನ ಕೂಲಿ.

- ಕಾಮಗಾರಿ ಸ್ಥಳಗಳಲ್ಲಿ ಮಹಿಳಾ ಸ್ನೇಹಿ ಶಿಶುಪಾಲನ ಕೇಂದ್ರ, ನೆರಳು , ಕುಡಿಯುವ ನೀರು ಸೌಲಭ್ಯ.

- ಮಹಿಳೆಯರು ಮಾಡಬಹುದಾದ ತೋಟಗಾರಿಕೆ , ಅರಣ್ಯ , ರೇಷ್ಮೆ , ಮಣ್ಣು ಅಗೆಯುವ ಕೆಲಸಗಳಿಗೆ ಆದ್ಯತೆ.

- ಮಹಿಳಾ ಕೂಲಿಕಾರರ ಕಾಯಕ ಸಂಘಗಳ ರಚನೆ, ಉತ್ತೇಜನ ಹಾಗೂ ಹೊಸದಾಗಿ ರಚಿಸುವ ಸಂಘಕ್ಕೆ ರೂ 300/–ಪ್ರೋತ್ಸಾಹಧನ ಪಾವತಿಸಲಾಗುತ್ತದೆ

- ಕೆಲಸಕ್ಕೆ ಕೂಲಿಕಾರರನ್ನು ಕರೆತಂದಲ್ಲಿ ಪ್ರತೀ ಕೂಲಿಕಾರನಿಗೆ ರೂ5/–ನಂತೆ ಪ್ರೋತ್ಸಾಹಧನವನ್ನು ಮಹಿಳಾ ಮೇಟ್ಗೆ  ಪಾವತಿಸಲಾಗುತ್ತದೆ.

- ಮಹಿಳಾ ಪ್ರಧಾನ ಕುಟುಂಬಗಳಿಗೆ ವೈಯಕ್ತಿಕ ಕಾಮಗಾರಿ ಅನುಷ್ಠಾನಕ್ಕೆ ಆದ್ಯತೆ ನೀಡುವುದು.

- ಮಹಿಳಾ ಸ್ವ ಸಹಾಯ ಸಂಘಗಳಿಗೆ ಅಣಬೆ ಬೇಸಾಯದ ಶೆಡ್ ನಿರ್ಮಾಣಕ್ಕೆ ರೂ . 95000/ – ನೆರವು.

